ಅಕ್ಕು ಕಥೆಯನ್ನು ನಿರೂಪಣೆ ಮಾಡುತ್ತಿರುವ ವ್ಯಕ್ತಿಯು ಆ ಮನೆಯ ಅಜ್ಜಯ್ಯನ  ಹಿರಿಯ ಮಗನ ಮಗಳು. ಈ ಹೆಣ್ಣು ಮಗಳು ಕಂಡಂತೆ ಅಜ್ಜಯ್ಯನ ಯಜಮಾನಿಕೆಯಲ್ಲಿ ತಮಗೆ ವಹಿಸಿದ ಕೆಲಸವನ್ನು ಕಟ್ಟುನಿಟ್ಟಿನಲ್ಲಿ ಎಲ್ಲರೂ ಪಾಲಿಸುತ್ತಿದ್ದರು . ವಾಸು ಚಿಕ್ಕಪ್ಪಯ್ಯ ,ಅವರ ಹೆಂಡತಿ ಭಾನು ಚಿಕ್ಕಿ ಮತ್ತು ದೊಡ್ಡಜ್ಜನ ತಂಗಿ ದೊಡ್ಡತ್ತೆ, ಇದರ ಜೊತೆಗೆ ತಲೆಕೆಟ್ಟಂತಹ ಅಕ್ಕು  ಇವರಿಗೆ ಮಾತ್ರ ಮನೆಯಲ್ಲಿ ಧ್ವನಿ ಇರುವುದು ನಿರ್ಬಂಧ ಇಲ್ಲದಿರುವುದು ಎಂದು ಆಕೆ ಹೇಳುತ್ತಾಳೆ. ಅಜ್ಜಯ್ಯನ ಹಿರಿಯ ಮಗಳಾದ ಅಕ್ಕುವಿಗೆ ವಿವಾಹವಾಗಿದ್ದರೂ ಗಂಡನ ಜೊತೆ ಇಲ್ಲದ ಕಾರಣ, ಆಕೆ ಕರಿಮಣಿಯನ್ನು ಕೆಲವೊಮ್ಮೆ ನಾಗಂದಿಗೆಯ ಮೂಲೆಯಲ್ಲಿಟ್ಟು ಹೊರಡುತ್ತಾಳೆ. ಅಕ್ಕು ನೋಡಲು ಕುಳ್ಳ ವಾಗಿದ್ದರು ಹಣೆಯಲ್ಲಿ ಕುಂಕುಮವಿದೆ. ಆಕೆಯ ಬಲಬದಿಯ ಹಣೆ ನಗ್ಗಾದಂತೆ ಕಾಣುತ್ತದೆ ಮತ್ತು ಸದಾ ಚಂಚಲವಾಗಿರುವ ಮಂದ ಕಾಂತಿಯ ಕಣ್ಣುಗಳನ್ನು ಹೊಂದಿದ್ದಾಳೆ. ತುಟಿಮೀರಿ ಬಂದಿರುವ ಹಲ್ಲುಗಳು ಸದಾ ಮುಚ್ಚಿಕೊಳ್ಳುವ ಪ್ರಯತ್ನದಲ್ಲಿ ಇರುವ ತುಟಿಗಳು ಹೀಗೆ ಇರುವ ಅಕ್ಕು ಯಾರಾದರೂ ಗಂಡನೆಲ್ಲಿ ಎಂದು ಪ್ರಶ್ನಿಸಿದರೆ ಕೆಲವೊಮ್ಮೆ ಅವರನ್ನು ತರಾಟೆಗೆ ತೆಗೆದುಕೊಳ್ಳುತ್ತಾಳೆ.,ಇನ್ನು ಕೆಲವು ಸಲ ಆಕೆ ನಕ್ಕು ತಲೆ ಕೊಡವಿ ಬಿಡುವ ರೀತಿಯಲ್ಲಿ ಹೊರಡುತ್ತಾಳೆ. ಈ ರೀತಿಯಲ್ಲಿದ್ದಾಗಲೂ ಆಕೆಯ ಕೈಯಲ್ಲಿ ಟುವಾಲು ಎಲ್ಲಾ ಸಂದರ್ಭದಲ್ಲೂ ಇರಬೇಕು ಅದು ಗಂಡಸರ ಕರ ವಸ್ತ್ರವಾಗಿದ್ದರು ಆಕೆ ಅದನ್ನು ಬಳಸುತ್ತಾಳೆ. ಈ ಕರವಸ್ತ್ರದಲ್ಲಿ ನಸ್ಯೆ ಪುಡಿ ಏರಿಸಿದ ಮೂಗನ್ನು ಒರೆಸಿ ಅದನ್ನು ಕೈಬೀಸುತ್ತಾ ಹೊರಟಾಗ ಹಾಸುವ ಹಾಸಣಿಗೆ ಬೀಸುವ ಬೀಸಣಿಗೆ ಊಟ ಎಲ್ಲಿ ಎಂದು ಒಗಟು ಮಾತಾಡುವವರಿಗೆ ಆಕೆ ಕೆಲವೊಮ್ಮೆ ಉತ್ತರ ನೀಡುತ್ತಾಳೆ ಇನ್ನು ಕೆಲವೊಮ್ಮೆ ನಿಮ್ಮಜ್ಜನ ಶ್ರಾದ್ಧಕ್ಕೆ ಎಂದು ಮುಖಕ್ಕೆ ಹೊಡೆದಂತೆ ಹೇಳಿ ಹೊರಡುತ್ತಾಳೆ.

ಅಕ್ಕು ತಪ್ಪಿಸದ ಊಟಗಳೆಂದರೆ ಅದು ಬಸುರಿ ಬಯಕೆಯ ಊಟ ಮತ್ತು ನಾಮಕರಣದ್ದು ಈ ರೀತಿಯಲ್ಲಿ ಹೊರಡುವ ಆಕೆ ಆ ಕಾರ್ಯಕ್ರಮ ಮುಗಿಯುವವರೆಗೂ ಹುಡುಗಿಯ ಕಡೆಯಿಂದ ಆಚೀಚೆ ಹೊರಡುವುದಿಲ್ಲ ಇನ್ನು ಮಗುವಿನ ನಾಮಕರಣಕ್ಕೆ ಹೋದರೆ ಮಗುವಿನ ತೊಟ್ಟಿಲ ತೂಗಿ ಬರುವುದನ್ನು ಆಕೆ ಬಿಡುವುದಿಲ್ಲ ಇಷ್ಟೆಲ್ಲಾ ಆಗಿ ಊಟ ಮುಗಿಸಿ ಬರುವಾಗ ಹಾಗೆ ಉಳಿದ ತಿಂಡಿಗಳನ್ನು ತನ್ನ ಕರವಸ್ತ್ರದಲ್ಲಿ ಹಿಡಿದು ತಂದು ತನ್ನ ಮನೆಯ ಜಗಲಿಯ ಮೇಲೆ ಕೂತು ಊಟ ಮಾಡುತ್ತಾಳೆ. ಸಿರಿಯತ್ತೆ ಹೇಳುವ ಪ್ರಕಾರ ಆಕೆಯ ಮದುವೆಯ ಸಂದರ್ಭದಲ್ಲಿ ದಿಬ್ಬಣಕ್ಕೆ ಎಂದು ಎಲ್ಲಾ ಜನರು ಹೊರಟಿದ್ದಾಗ ಆಕೆಯನ್ನು ಕಾಣಲು ಬಂದ ಅಕ್ಕು ಅವಳ ನೆತ್ತಿಯ ವರೆಗೆ ಮುಡಿದಿದ್ದ ಹೂವನ್ನು ಕಿತ್ತು ನೀನು ಎಷ್ಟೇ ಅಲಂಕಾರ ಮಾಡಿಕೊಂಡರು ನಿನ್ನ ಗಂಡ ನಿನ್ನ ಜೊತೆಯಲ್ಲಿ ಬಾಳುವುದಿಲ್ಲ ಇದನ್ನು ಗೋಡೆಯ ಮೇಲೆ ಬರೆದಿಟ್ಟುಕೋ ಎಂದು ತಾನು ಸತ್ಯವನ್ನೇ ಹೇಳುತ್ತಿರುವುದಾಗಿ ಆಕೆಯನ್ನು ಹೆದರಿಸುತ್ತಾಳೆ. ತದನಂತರ ಅಲ್ಲಿಗೆ ಬರುವ ದೊಡ್ಡತ್ತೆ ಅವಳ ಕೂದಲನ್ನು ಸರಿಮಾಡಿ ಮದುವೆಗೆ ಕರೆದೊಯ್ಯುತ್ತಾಳೆ. ಸಿರಿಯತ್ತೆಯ ಮದುವೆಯ ನಂತರ ಅಕ್ಕು ತನ್ನ ಗಂಡನನ್ನು ಕರೆತರುವಂತೆ ಬೇಡಿಕೆಯನ್ನು ಇಡುತ್ತಾಳೆ. ಭಾನುಚಿಕ್ಕಿ ಆಗ ಬೊಂಬೆ ಒಂದನ್ನು ತೋರಿಸಿ ಆಗಲಿಂದ ನನ್ನ ಹೆಂಡತಿಯೆಲ್ಲಿ ಎಂದು ಕೇಳುತ್ತಿದೆ, ತಗೋ ಎಂದು ಕೊಡುತ್ತಾಳೆ . ಅಡುಗೆ ಬಾಬು ಭಟ್ಟನನ್ನು ತೋರಿಸಿ ಚಿಕ್ಕಪ್ಪಯ್ಯ ಆತನೇ ಅವಳ ಗಂಡನೆಂದು ನಗಾಡುತ್ತಾನೆ ಅಷ್ಟರಲ್ಲಿ ಯಕ್ಷಗಾನದಲ್ಲಿ ಸ್ತ್ರೀ ಪಾತ್ರ ಮಾಡುವ ತಮ್ಮಣ್ಣಯ್ಯ ತಾನೇ ನಿನ್ನ ಗಂಡನೆಂದು ಹೇಳಿದಾಗ ಆತನ ಕೈಯನ್ನು ಕಚ್ಚಿ ಎಲ್ಲರ ಹಾಸ್ಯವನ್ನು ನಂದಿಸುವಂತಹ ಮಾತನ್ನು ಅಕ್ಕು ಮಾತನಾಡುತ್ತಾಳೆ. ಹೊರಗಡೆ ತಿರುಗುವುದರಿಂದ ಇತ್ತೀಚೆಗೆ ಇಂತಹ ಮಾತುಗಳನ್ನು ಕಲಿತಿದ್ದಾಳೆಂದು ವಾಸು ಚಿಕ್ಕಪ್ಪಯ್ಯ ಚಿಂತಿಸಿದ. ಮಾರನೆಯ ದಿನ ಯಾರು ಮಾತನಾಡಿಸಕೂಡದು ಎಂದರು ಅಂತಣ್ಣವೆಂಬವ ನಿನ್ನ ಗಂಡ ಸಿಕ್ಕನೆ ಎಂದು ಪ್ರಶ್ನಿಸಿದಾಗ ಆತನನ್ನು ಹೂಳಿ ಬಂದೆ ಎಂದಳು ಅಕ್ಕು.

ಅಟ್ಟೆಕಾಲಿನ ದೊಡ್ಡತ್ತೆ ಬಾಗು ಬೆನ್ನಿನ ಈಕೆ ಅಕ್ಕುವಿನ ಸೌಂದರ್ಯವನ್ನು ಕುರಿತು ಹಾಡುತ್ತಾ ಮಾತಿನಲ್ಲಿ ಆಕೆಯನ್ನು ಕೆಣಕುತ್ತಿದ್ದಳು ತನ್ನಟುವಾಲು ಎಲ್ಲಿ ಎಂದು ಪ್ರಶ್ನಿಸಿದಾಗ, ಸತ್ಯಮಾಣಿ ತಾನು ಬೆಳಗ್ಗೆ ಎದ್ದ ಕೂಡಲೇ ಮಂಜರ ಹೋಟೆಲಿಗೆ ಕಾಫಿ ಕುಡಿಯಲು ಹೋಗುತ್ತಿರುವುದಾಗಿ  ಹೇಳಿತು ಎಂದು ಓಡಿದನು. ಆತನನ್ನು ಹಿಂಬಾಲಿಸದೆ ಕುಳಿತಲ್ಲೆ ನಕ್ಕು ಪೂರೈಸಿದ ಅಕ್ಕು ದೊಡ್ಡತ್ತೆಯನ್ನು ತಾನು ಬಿಲ್ಲನ್ನು ಮಾಡಿ ಕಂಕಳುವಿಗೇರಿಸಿಕೊಳ್ಳುತ್ತೇನೆ ಎನ್ನುತ್ತಾಳೆ. ಆಗ ತಾನು ಬದುಕಿರುವವರೆಗೆ ನನ್ನನ್ನೇನು ಮಾಡಬೇಡ ಎಂದು ನಾಟಕೀಯವಾಗಿ ಹೆದರಿದಂತೆ ಹೇಳಿ ಪಾಪವೆಂದಳು ದೊಡ್ಡತ್ತೆ.  ತಾನು ಯಾತಕ್ಕಾಗಿ ಪಾಪ, ನಿನ್ನ ಹಾಗೆ ಗಂಡ ಸತ್ತಿಲ್ಲ ತನಗೆ. ಆತ

ಬಾಸಾಯಿ ತಿನ್ನಲು ದೇಶಾಂತರ ಹೊರಟನೆಂದೆ ತಾನು ಪಾಪವೇ, ಮೈ ಮೇಲೆ ಬಂದ ಅಡ್ಡದ ಮನೆ ತಿಮ್ಮಪ್ಪಯ್ಯನ ಹೊಂಡಕ್ಕೆ ದೂಡುವವಳು ತಾನು ಎಂದು ಹೇಳುತ್ತದ್ದಾಗ ಅಜ್ಜಯ್ಯ ವಾಸುವಿಗೆ ಹೊಡೆಯುವಂತೆ ಅವಳ ಮಾತನ್ನು ಕೇಳಿ ಅಂದಾಗ ಆಕೆ ಹೊಡೆದೇ ಬಿಟ್ಟರೆಂಬಂತೆ ಓಡುತ್ತಾಳೆ.

ಸಿರಿಯತ್ತೆಯ ಸ್ವಂತ ಅಕ್ಕಳಾದ ಅಕ್ಕುವನ್ನು ಕುರಿತು, ಏನಿಲ್ಲವೆಂದರೂ ತಲೆಯೊಂದು ಸರಿ ಇರಬೇಕು ಇಲ್ಲದೆ ಹೋದರೆ ಹೆತ್ತ ತಂದೆ ತಾಯಿಗಳಿಗೂ ಊರ ಜನರಿಗೂ ತಾತ್ಸಾರವಾಗುತ್ತಾರೆ ಎಂದು ಹೇಳುತ್ತಾಳೆ. ಅಕ್ಕುವನ್ನು ಗಂಡ ಬಿಟ್ಟು ಹೋದ ನಂತರದಲ್ಲಿ ಅವಳ ಮತಿ ಕೆಡುತ್ತದೆ. ಅಲ್ಲಿಂದ ಸಮಾಜ ಆಕೆಯನ್ನು ನೋಡುವ ದೃಷ್ಟಿಯು ಬದಲಾಗುತ್ತದೆ. ಇಂತಹ ಅಕ್ಕು ಗಂಡ ಬಿಟ್ಟು ಹೋದಾಗಲಿಂದ ಬಸುರಿ ಎಂಬಂತೆ ವರ್ತಿಸುವುದು, ತಂದೆಯಿಂದ ಏಟು ತಿಂದ ಬಳಿಕ ಹದಿನೈದು ದಿನಗಳ ಕಾಲ ಸುಮ್ಮನಿರುವುದು ನಡೆಯುತ್ತಿತ್ತು. ಸಾಮಾನು ಸರಂಜಾಮು ತುಂಬಿದ ಕೋಣೆಯಲ್ಲೇ ವಾಸವಿದ್ದ ಅಕ್ಕು ಒಮ್ಮೆ ತೊಟ್ಟಿಲಲ್ಲಿ ಕೂತು ತಾನೇ ತೂಗಿಕೊಳ್ಳುವ ಸಾಹಸ ಕಂಡ ವಾಸು ಹೀಗೆ ಆದರೆ ಯಾವುದಾದರೂ ಪ್ರೇತವೆ ಇವಳನ್ನು ಹೊಕ್ಕುತ್ತದೆ ಎಂದಾಗ ದೊಡ್ಡತ್ತೆ ಇವಳು ಪ್ರೇತವನ್ನೇ ದೂಡಿಬರುವವಳು ಭಯ ಬೇಡವೆಂದು ದೊಡ್ಡತ್ತೆ ಹೇಳುತ್ತಾಳೆ

ಹೀಗಿರಲೊಂದು ದಿನ ಸಂಕಪ್ಪ ಅಕ್ಕು ವನ್ನು ಕಾಣಲು ಬಂದು, ಆಕೆ ಬಸುರಿ ಎಂಬ ಸುದ್ಧಿ ಕೇಳಿ ಹೊರಡುವಾಗ ಆಕೆಯ ಮತಿಭ್ರಮಣೆಯನ್ನು ಕುರಿತು ತಿಳಿಸಿ ಕರೆತಂದರು. ಕಫ ತುಂಬಿದ ಗಗ್ಗರ ಸ್ವರದಲ್ಲಿ ಮಾತಾಡುತ್ತಿದ್ದ ಆತ ನೋಡಲು ಚೇಂಕಟೆಯಾಗಿದ್ದ. ತಾನು ಸನ್ಯಾಸಿಗಳ ಹಿಂದೆ ಹೊರಟದ್ದು ಲಾಭಕ್ಕಾಗಿಯೇ ಎಂದಾಗಲೂ ಅಜ್ಜಯ್ಯ ಆತನನ್ನು ಮಾತಾಡಿಸಲಿಲ್ಲ. ಅಕ್ಕುವನ್ನು ಕರೆಸಿದಾಗ ಆಕೆ 'ತಾನು ಸತ್ತು ಮೂರು ರಾತ್ರಿ ಮೂರು ಹಗಲಾಗಿದೆ ಈಗ ತಿಥಿ ಕಾರ್ಯ ನಡೆಸಲು ಬಂದನೇನು'ಎಂದು ಪ್ರಶ್ನಿಸುತ್ತಾಳೆ. ಅಜ್ಜಯ್ಯ ಸಂಕಪ್ಪನಿಗೆ ನಿನ್ನಿಂದ ಈ ಸ್ಥಿತಿಗೆ ತಲುಪಿದ್ದಾಳೆ. ಎರಡು ದಿನವಿದ್ದು ಆಕೆಯನ್ನು ಕರೆದೊಯ್ಯಿ ಎಂದು ತಿಳಿಸುತ್ತಾರೆ. ಆಗ ಈತನೊಂದಿಗೆ ನನ್ನ ಹೆಣವೂ ಹೋಗದು ಎನ್ನುತ್ತಾಳೆ ಆಕೆ. ಚಾವಡಿಯಲ್ಲೇ ಮಲಗುತ್ತಿದ್ದ ಸಂಕಪ್ಪ ಒಮ್ಮೆ ಅಕ್ಕುವಿನ ಬಳಿ ಹೋದದನ್ನು ಕಂಡಂತೆ ದೊಡ್ಡತ್ತೆ ಹೇಳುತ್ತಿರುವಾಗಲೇ ಅಲ್ಲಿಗೆ ಬಂದ ಅಕ್ಕು ತಡರಾತ್ರಿ ಆಕೆಯೊಂದಿಗೆ ಕೆಟ್ಟದ್ದಾಗಿ ವರ್ತಿಸಲು ಪ್ರಯತ್ನಿಸಿದಾಗ ತಾನು ಕೊಟ್ಟ ಸರಪಳಿ ಏಟಿನಿಂದ ಆತ ಓಟ ಕಿತ್ತಿರಬೇಕೆಂದಳು. ಆತನಿಗಿಂತಲು ಅಡ್ಡದ ಮನೆ ತಿಮ್ಮಪ್ಪಯ್ಯನೇ ಚೆಂದ ಎಂದು ಮುಂತಾಗಿ ಮಾತಾಡುವಾಗ ಅದನ್ನು ಕೇಳಿದ ಅಜ್ಜಯ್ಯ ಅಕ್ಕು ಮತ್ತು ಸಂಕಪ್ಪನನ್ನು ಇಲ್ಲಿಂದ ಕಳಿಸಿ ಆಮೇಲೆ ಎಲ್ಲಾದರೂ ಹೋಗಿಸಾಯಲಿ ಎಂದು ಸಿಟ್ಟಿನಿಂದ ಕೂಗುತ್ತಾ ತನ್ನ ಯಾವ ಜನ್ಮದ ಪ್ರಾರಬ್ಧವಿದು ಎಂದು ದುಃಖ ಪಡುತ್ತಾರೆ. ವಾಸು ಆಕೆಯನ್ನು ಹೊಡೆಯುವಾಗ ಅವಳ ಆರ್ಭಟವು ಹೆಚ್ಚುತ್ತದೆಯೆ ಹೊರತು ಕಮ್ಮಿಯಾಗಲಿಲ್ಲ. ಅವಳ ಕೂಗನ್ನು ಕೇಳುವ ಯಾರೊಬ್ಬರೂ ತಡೆಯಲಿಲ್ಲ. ಕೊನೆಗೆ ವಾಸುವೇ ಸೋತು ಹೊಡೆಯುವುದನ್ನು ನಿಲ್ಲಿಸಿ ಹೊರಬಂದರೆ ಅವನ ಬಗ್ಗೆಯೂ ಕೆಟ್ಟ ರೀತಿಯಲ್ಲಿ ಮಾತನಾಡುತ್ತಾಳೆ ಅಕ್ಕು. ಹೀಗೆ ವೈವಾಹಿಕ ಜೀವನದ ವೈಫಲ್ಯದಿಂದ ಮತಿಭ್ರಮಣೆಯಾಗುವ ಅಕ್ಕು ಉಳಿದವರಿಗೆ ಮನರಂಜನೆ,ಹಾಸ್ಯ. ಆದರೆ ಆಕೆಯನ್ನು ಲಘುವಾಗಿ ಸ್ವೀಕರಿಸಿ ಮಾತನಾಡಿದರೆ ಉಳಿದವರ ಜೀವನವು ಸಮಾಜದಲ್ಲಿ ನಗೆಪಾಟಲೀಡಾಗುತ್ತದೆ.

ಭುವನೇಶ್ವರಿ ಜಿ

ಕನ್ನಡ ವಿಭಾಗ